ದಿನಾಂಕಃ 01-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: **1** ನೇ ಪ್ರತಿವಾದಿ ಪರ ಶ್ರೀ ಎಜೆವಿ ವಕೀಲರಿಂದ:</u>

ನಾನು 2023 ರಲ್ಲಿ ಕರ್ನಾಟಕ ಬ್ಯಾಂಕ್ ಮಹಾಲಿಂಗಪೂರ ಶಾಖೆಗೆ ವರ್ಗಾವಣೆಗೊಂಡಿರುತ್ತೇನೆ. ಈ ಪ್ರಕರಣದ ಬಗ್ಗೆ ನನಗೆ ವೈಯಕ್ತಿಕವಾದ ಮಾಹಿತಿ ಇಲ್ಲ, ಆದರೆ ದಾಖಲೆಗಳ ಆಧಾರದ ಮೇಲೆ ಸಾಕ್ಷಿ ಹೇಳಿರುತ್ತೇನೆ. 1 ನೇ ಪ್ರತಿವಾದಿ ವಿದ್ಯಾಭ್ಯಾಸ ಮಾಡಿಲ್ಲ, ಆ ಬಗ್ಗೆ ನಾನು ವಿಚಾರಣೆ ಮಾಡಿರುತ್ತೇನೆ. ಈ ಪ್ರಕರಣ ದಾಖಲು ಮಾಡಲು ನಮಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳು ಈ ಪ್ರಕರಣ ದಾಖಲು ಮಾಡಲು ಅಧಿಕಾರ ಪತ್ರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಕರ್ನಾಟಕ ಬ್ಯಾಂಕ್ ಲಿ. ಮಹಾಲಿಂಗಪೂರ ಶಾಖೆಯ ಮ್ಯಾನೇಜರ ಇರುವುದಿಲ್ಲ, ಆದ್ದರಿಂದ ನನಗೆ ಸಾಕ್ಷಿ ನುಡಿಯಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಾನು ಅಧಿಕಾರ ಪತ್ರ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಬೆಳೆ ಸಾಲ ರೂಪದಲ್ಲಿ ದಿನಾಂಕಃ 29-08-2013 ರಂದು ರೂ.5,85,000/- ಮಂಜೂರು ಮಾಡಿರುತ್ತೇವೆ. ಅದೇ ದಿನ ರೂ.3,20,000/- ಮತ್ತು ದಿನಾಂಕಃ 31-08-2013 ರಂದು ರೂ.75,000/- ಕೊಟ್ಟಿರುತ್ತೇವೆ. ಒಟ್ಟು 1 ನೇ ಪ್ರತಿವಾದಿಗೆ ರೂ.4,40,000/- ಸಾಲ ಕೊಟ್ಟಿರುತ್ತೇವೆ. ನನ್ನ ವಾದ ಪತ್ರದಲ್ಲಿ ರೂ.4,40,000/- ಪ್ರತಿವಾದಿಗೆ ಸಾಲದ ರೂಪದಲ್ಲಿ ಕೊಟ್ಟಿರುವುದು ಬರೆದಿಲ್ಲ ಎಂದರೆ ಸರಿ. ನಾವು 1 ನೇ ಪ್ರತಿವಾದಿಯಿಂದ ಹೆಚ್ಚಿನ ಹಣ ಪಡೆಯುವ ಸಲುವಾಗಿ, ರೂ.5,85,000/- ಕೊಟ್ಟಿರುತ್ತೇವೆ ಎಂದು, ಅದರ ಮೇಲೆ ಬಡ್ಡಿ ಸೇರಿಸಿ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕಃ 29-08-2013 ರಂದು 1 ನೇ ಪ್ರತಿವಾದಿಗೆ ರೂ.3,20,000/- ನೀಡಿದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ರ ದಾಖಲೆ ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಬೆಳೆ ಸಾಲ ಮಂಜೂರು ಮಾಡಿರುತ್ತೇವೆ. 5 ನೇ ವರ್ಷ 1 ನೇ ಪ್ರತಿವಾದಿಗೆ ರೂ.5,85,000/- ಸಾಲ ಮಂಜೂರು ಮಾಡಿರುತ್ತೇವೆ ಎಂದರೆ ಸರಿ, ಸಾಕ್ಷಿ ಮುಂದುವರೆದು ರೂ.4,40,000/- ಮಾತ್ರ ಕೊಟ್ಟಿರುವುದಾಗಿ ಹೇಳುತ್ತಾರೆ. ವಾದ ಪತ್ರದಲ್ಲಿ ರೂ.4,40,000/-

1 ನೇ ಪ್ರತಿವಾದಿಗೆ ನೀಡಿರುವ ಬಗ್ಗೆ ಬರೆದಿಲ್ಲ, ರೂ.5,85,000/- ನೀಡಿದ ಬಗ್ಗೆ ಬರೆದಿರುತ್ತೇವೆ ಎಂದರೆ ಸರಿ.

1 ನೇ ಪ್ರತಿವಾದಿಗೆ ಈ ಪ್ರಕರಣದಲ್ಲಿ ಓವರ ಡ್ರಾಫ್ಟ ಸೌಲಭ್ಯದ ಸಾಲ ಮಂಜೂರು ಮಾಡಿರುತ್ತೇವೆ. ಪ್ರತಿವಾದಿಯರು ವಾರ್ಷಿಕ ಶೇ.11.25 ಬಡ್ಡಿ ಸೇರಿಸಿ ಕೊಡುವುದಾಗಿ ಒಪ್ಪಿದ್ದರು. ನಿಪಿ-3 ರ ಪ್ರಕಾರ ಬಡ್ಡಿ ವಾರ್ಷಿಕ ಶೇ.10.75 ಇರುತ್ತದೆ, ನಿಪಿ-1 ರ ಪ್ರಕಾರ ವಾರ್ಷಿಕ ಶೇ.12.40 ಇದೆ ಎಂದರೆ ಸಾಕ್ಷಿ ಬ್ಯಾಂಕಿನ ನಿಯಮಾವಳಿಗಳ ಪ್ರಕಾರ ಹೆಚ್ಚು ಕಡಿಮೆ ಆಗುತ್ತದೆ ಎಂದು ಹೇಳುತ್ತಾರೆ. ಪ್ರತಿವಾದಿಗೆ ಎಷ್ಟು ಪ್ರತಿಶತ ಬಡ್ಡಿ ರೂಪದಲ್ಲಿ ಸಾಲ ನೀಡಿರುವ ಬಗ್ಗೆ ಯಾವ ದಾಖಲೆಗಳಲ್ಲಿ ನಿಖರವಾಗಿ ಹೇಳಿಲ್ಲ ಎಂದರೆ ಸರಿಯಲ್ಲ. ಎಷ್ಟು ಪ್ರತಿಶತ ಬಡ್ಡಿ ಸೇರಿಸಿ ಒಟ್ಟು ಹಣದ ಮರುಪಾವತಿಗಾಗಿ ಈ ದಾವೆ ಸಲ್ಲಿಸಿರುತ್ತೇನೆ ಎಂದು ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಕಾನೂನುಬಾಹೀರ ಬಡ್ಡಿ ಹಾಕಿ ಹೆಚ್ಚಿನ ಮೊತ್ತ ತೋರಿಸಿ ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗೆ ದಿನಾಂಕಃ 29-08-2013 ರಂದು ರೂ.5,85,000/- ಕೊಟ್ಟಿರುವುದಾಗಿ ವಾದ ಪತ್ರದಲ್ಲಿ ಹೇಳಿರುತ್ತೇವೆ ಎಂದರೆ ಸರಿ. ಪ್ರತಿವಾದಿಗೆ ಸಾಲ ನೀಡಿದ ಹಣದ ಮೇಲೆ ಬಡ್ಡಿ ಹಾಕಿದಾಗ ರೂ.14,06,538.62 ಆಗುವುದಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕದಂದು, ಎಷ್ಟು ಸಾಲದ ಮೊತ್ತ ಪ್ರತಿವಾದಿಯ ಖಾತೆಗೆ ಬಿಡುಗಡೆ ಮಾಡಿರುತ್ತೇವೆ ಹಾಗೂ ಆ ಬಗ್ಗೆ ಎಷ್ಟು ಬಡ್ಡಿ ಸೇರಿಸಿರುತ್ತೇವೆ ಎಂದು ನಿಖರವಾಗಿ ವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಾವು ವಾದ ಪತ್ರ ಮತ್ತು ದಾಖಲೆಗಳ ಪ್ರಕಾರ ಒಟ್ಟು 5 ವರ್ಷಗಳಲ್ಲಿ ರೂ.5,85,000/- ಸಾಲ ಬಿಡುಗಡೆ ಮಾಡಿದ್ದು, ಆದರೆ ಮೊದಲನೆಯ ವರ್ಷದಿಂದ ರೂ.5,85,000/- ಗಳ ಮೇಲೆ ಬಡ್ಡಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರೂ.4,40,000/- ಸಾಲದ ಮಾತ್ರ ಬಡ್ಡಿ ಹಾಕಿರುವುದಾಗಿ ಹೇಳುತ್ತಾರೆ. ಪ್ರತಿವಾದಿ ರೂ.4,40,000/- ಮರುಪಾವತಿ ಮಾಡಿ, ಪುನಃ ರೂ.4,40,000/- ಸಾಲ ಪಡೆದಿರುತ್ತಾರೆ. ಪ್ರತಿವಾದಿ ಸಾಲ ಮರುಪಾವತಿ ಮಾಡಿದ ಬಗ್ಗೆ ನಿಪಿ-1 ರಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಂತೆ ಬಡ್ಡಿಯನ್ನು ಆರ್.ಬಿ.ಐ. ನಿಯಮಾವಳಿಗಳ ವಿರುದ್ದ ಹಾಕಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಯಲು ನಾನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಮುಖ್ಯ ವಿಚಾರಣೆಯ ಕಂಡಿಕೆ 7 ರಲ್ಲಿ ಬರೆದ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ನಮ್ಮ ಬ್ಯಾಂಕಿಗೆ ನಾನು ಬಂದ ನಂತರ ಬಂದಿರುವುದಿಲ್ಲ, ಆದರೆ ಮೊದಲು ಬಂದಿರುವ ವಿಷಯ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಸಾಲ ಪಡೆಯಲು ಮಾತ್ರ ಬ್ಯಾಂಕಿಗೆ ಬಂದಿದ್ದರು ನಂತರ ಎಂದೂ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಿಂದ 10 ರ ಮೇಲೆ 1 ನೇ ಪ್ರತಿವಾದಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಿನಾಂಕಃ 07-05-2015, 05-04-2018, 06-08-2020, 23-03-2023 ರಂದು ಬ್ಯಾಂಕಿಗೆ ಭೇಟಿ ಕೊಟ್ಟಿಲ್ಲ, ಯಾವುದೇ ದಾಖಲೆಗಳ ಮೇಲೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-7 ಮತ್ತು 8 ರಲ್ಲಿ ಇರುವ ಹೆಬ್ಬಟ್ಟಿನ ಸಹಿ ಯಾರಿಗೆ ಸೇರಿದ್ದು ಎಂದು ಮತ್ತು ಅದನ್ನು ಗುರುತಿಸಿದವರ ಸಹಿ ಇಲ್ಲ ಎಂದರೆ ಸರಿಯಲ್ಲ. ನಿಪಿ-7 ಮತ್ತು 8 ರಲ್ಲಿ ಇರುವ ಬರವಣಿಗೆ ಬೇರೆ ಬೇರೆ ಇವೆ ಎಂದರೆ ಸರಿಯಲ್ಲ. ನಿಪಿ-7 ಮತ್ತು 8 ರಲ್ಲಿರುವ ಹೆಬ್ಬೆಟ್ಟಿನ ಗುರುತುಗಳು ಒಂದೇ ತರಹ ಇಲ್ಲ ಎಂದರೆ ಸರಿಯಲ್ಲ. ಕಾಲಪರಿಮಿತಿ ಅಡಿಯಲ್ಲಿ ದಾವೆ ಇರದೇ ಇರುವುದರಿಂದ ನಿಪಿ-7 ಮತ್ತು 8 ರ ದಾಖಲೆಗಳನ್ನು ಈ ಪ್ರಕರಣ ಸಲ್ಲಿಸುವ ಸಲುವಾಗಿ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-7 ಮತ್ತು 8 ರಲ್ಲಿ ಇರುವ ಹೆಬ್ಬೆಟ್ಟಿನ ಗುರುತುಗಳು ಪ್ರತಿವಾದಿಗೆ ಸೇರಿದ್ದವುಗಳಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು**:** **2** ನೇ ಪ್ರತಿವಾದಿ ಪರ ವಕೀಲರಿಂದ**:**</u>

ಸದರಿ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಸಕಾರಣಗಳು ಇರದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA
Date: 2025.07.01 15:59:14 +0530

ಹಿರಿಯ ದಿವಾಣಿ ನ್ಯಾಯಾಧೀಶರು,

ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ